117

ಮೈಸೂರ ಗೆಜಿಟ.

ಸಂ. XXXI. ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 3, ಸ॥ 1896.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀ ಪರೀಕ್ಷೆಗಳು.

ಸ॥ 1896ನೇ ಇಸವಿ ಆಗಸ್ಟು ತಾರೀಖು 6.

(i) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷೆಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ವಚನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸ॥ 1896ನೇ ಇಸವಿ ಆಗಸ್ಟು ತಾರೀಖು 14.

ಸಿ. ಬಸ॥; ಸಿ. ಕೆ. ಸುಬ್ಬರಾವು ಇವರುಗಳಿಂದ ರಚಿತವಾದ ವ್ಯವಸಾಯ ಶಾಸ್ತ್ರದ ಪ್ರಥಮ ಪುಸ್ತಕವು ತತ್ಕಾಲದಲ್ಲಿ ಭಾಷಾ ನಲ್ಪಡುವದಿಲ್ಲವಾದ್ದರಿಂದ ಇತರಪರ ಮತ್ತೊಂದು ಅಪ್ಪಣೆ ಕೊಡುವ ವರವಿಗೂ ಹಾರ್ಮ್ಯಾ ಸಾಹೇಬರವರಿಂದ ರಚಿಸಲ್ಪಟ್ಟ ಕನ್ನಡ ವ್ಯವಸಾಯ ಕ್ರಮ ಬೋಧಿನಿ ಎಂಬ ಪುಸ್ತಕವು ವ್ಯವಸಾಯ ಶಾಸ್ತ್ರಕ್ಕಾಗಿ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟು 1896.

ನಂಬರು 1. ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು (729) ಫೈನಲ್ ಟೈಟಲ್‌ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

118

2. ಸದರೀ ತಾಲ್ಲೂಕಿನ ಅಮಲ್ದಾರ್ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್ರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿಪಟ್ಟೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್ಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇ ಸ್ತಿ ಹಾ ರ್ ನಾ ಮೆ .

ತಾರೀಖು 15ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ನಾರ್ದರ್ನ್ ಎಕ್ಸ್‌ಟೆರ್ಷನ್‌ನಲ್ಲಿ ಮನೆ ನಿವೇಶನಗಳ ಪೈಕಿ ಖಾಲಿ ಇರುವ ಈ ಕೆಳಗೆ ನಮೂದಿಸಿ ಇರುವ ನಂಬರುಗಳುಳ್ಳ 8 ನಿವೇಶನಗಳನ್ನ ಈ ಮಾಹೆ 28ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಡಿಟೋ ಜಾಗಾದ ಬಳಿಯಲ್ಲೇ ಹರಾಜ್ ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳ ಬಹುದು.

2. ಸವಾಲ್ ಖೈದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆಯನ್ನ ಕೂಡ್ಲೆ ಡಿಪಾಜಿಟ್ಟು ಗಿ ಹಾಜರ್ಮಾಡಿ ಮಂಜೂರಿ ಆರಡರ್ ಕೊಟ್ಟ 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿ ಮಾಡಿ ರಕೀತಿ ಪಡದು ಜಮ್ಮಿ ಸುಛರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಛರ್ದು ಮಾಡಿಕೊಂಡ 2 ತಿಂಗಳೊಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿಕೊಂಡು ಪ್ಯಾರ್ಕ್ ಹಾಜರ್ಮಾಡಿ ಲೈಸೆನ್ಸ್ ಪಡದು 12 ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಇಲ್ಲದೆ ಸೈಟ್ ಸರ್ಕಾರಕ್ಕೆ ಕೇರಿಸಿಕ್ಕೊಂಡು ಹರಾಜ್ ಮಾಡಿಸಲ್ಪಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲೀ ಅಥವಾ ಮಂಜೂರಿ ಆರ್ಡರ್ ಪಡದ 7 ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲೀ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರಿ ಮೇಲೆ ಸೈಟ್ ಪುನಹಾ ಹರಾಜ್ ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನು ತಿಳಿಸದೆ ಯಾವ ಸವಾಲನ್ನಾಗಲೀ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿ ಇರುವರು ವುಳಿಸಿಕೊಂಡು ಇರುತ್ತಾರೆ.

ಸೈಟ್ ನಂಬರ್.		ಸೈಟ್ ನಂಬರ್.
30	..	59
43	..	99
57	..	102
58	..	103

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು 1ನೇ ಪ್ಯಾಲೇಸ್ ಡಿವಿಜ್‌ಗೆ ಸೇರಿದ ಹೊಸ ಗುಟ್ಟ ಹಳ್ಳಿ ಬಳಿಯಲ್ಲಿ ಮನೆಗಳಿಗಾಗಿ ವಿಂಗಡಿಸಿರುವ ನಿವೇಶನಗಳ ಪೈಕಿ ಈ ಕೆಳಗೆ ನಮೂದಿಸುವ 30 ನಿವೇಶನಗಳನ್ನ ಆವುಗಳ ಮಾರ್ಜ್ಜನ್ನಲ್ಲಿ ನಮೂದಾದ ತಾರೀಖುಗಳಲ್ಲಿ ಪ್ರಾತಃಕಾಲ 7½ ಘಂಟೆಯಿಂದ ಡಿಟೋ ಜಾಗಾದಬಳಿಯಲ್ಲೇ ಹರಾಜು ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು.

2. ಛಡಸವಾಲ್‌ದಾರ್ರು ಸವಾಲ್ ಖೈದಾದ ಕೂಡ್ಲೆ ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆ ಮೊಬಲಗನ್ನ ಹಾಜರ್ಮಾಡಿ ಮಂಜೂರಿ ಆರ್ಡರ್ ಕೊಟ್ಟ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮ್ಮಿ ಸುಛರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಛರ್ದು ಮಾಡಿಕೊಂಡ ತಾರೀಖು ಲಾಗಾಯತು ಎರಡು ತಿಂಗಳವಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿ ಕೊಂಡು, ಪ್ಯಾರ್ಕ್ ಹಾಜರುಮಾಡಿ ಲೈಸೆನ್ಸ್ ಪಡದು ಹನ್ನೆರಡು ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಯಿಲ್ಲದೆ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪಾವತಿ ಮಾಡದೆಯೊಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುವದು. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿರುವರು ವುಳಿಸಿಕೊಂಡಿರುತ್ತಾರೆ:—

ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.
15	1896ನೇ ಇಸವಿ ಸೆಪ್ಟೆಂಬರು ತಾರೀಖು 14ನೇ ಪ್ರಾತಃಕಾಲ 7½ ಘಂಟೆ ಲಾಗಾಯತು.	25	ಡಿಟೋ ಮಾಹೆ 16ನೇ ತಾರೀ ಖು ಪ್ರಾತಃಕಾಲ 7½ ಘಂಟೆ ಲಾಗಾಯತು.	35	ಡಿಟೋ ಮಾಹೆ 18ನೇ ತಾರೀ ಖು ಪ್ರಾತಃಕಾಲ 7½ ಘಂಟೆ ಲಾಗಾಯತು.
16		26		36	
17		27		37	
18		28		38	
19		29		39	
20		30		40	
21		31		41	
22		32		42	
23		33		43	
24		34		44	

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.